# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ) ರವರ ಕಾರ್ಯಾಲಯ, ಶಿವಗಂಗೋತ್ರಿ.ದಾವಣಗೆರೆ-577002

**E-mail:** registrarevaluationdvg@gmail.com ದೂ.ಸಂಖ್ಯೆ : **08192-208420, 208106**


ಸಂಖ್ಯೆ:ದಾವಿ/ಪವಿ/ಯು.ಜಿ/ಬಿ.ಇಡಿ/3779/2018-19 ದಿನಾಂಕ:30-11-2018

## ಪರಿಷ್ಕೃತ ಪ್ರಕಟಣೆ

ವಿಷಯ: ಡಿಸೆಂಬರ್-2018ರಲ್ಲಿ ನಡೆಯುವ ಬಿ.ಇಡಿ II ಮತ್ತು IV ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: 1) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 13-11-2018.
2) ಈ ಕಛೇರಿ ಪ್ರಕಟಣೆ ಸಂಖ್ಯೆ:ದಾವಿ/ಪವಿ/ಯು.ಜಿ/ಬಿ.ಇಡಿ/3512/2018-19, ದಿನಾಂಕ:13.11.2018.
3) ಈ ಕಛೇರಿ ಪ್ರಕಟಣೆ ಸಂಖ್ಯೆ:ದಾವಿ/ಪವಿ/ಯು.ಜಿ/ಬಿ.ಇಡಿ/3650/2018-19, ದಿನಾಂಕ:17.11.2018.

*****

ದಾವಣಗೆರೆ ವಿಶ್ವವಿದ್ಯಾನಿಲಯವು ಪರೀಕ್ಷಾ ಸುಧಾರಣೆಗೆ ಸಂಬಂಧಪಟ್ಟಂತೆ ಮಾಹಿತಿ ತಂತ್ರಜ್ಞಾನವನ್ನು ಬೃಹತ್ ಮಟ್ಟದಲ್ಲಿ ಅಳವಡಿಸುತ್ತಿದೆ. ಈ ಸಂಬಂದವಾಗಿ ಕಾಲೇಜುಗಳು ಹಾಗೂ ವಿದ್ಯಾರ್ಥಿಗಳಿಗೆ ಮಾಹಿತಿಗಳು/ಸಂದೇಶಗಳನ್ನು Web Portal / Mobile App ಮುಖಾಂತರ ತಲುಪಿಸಲು ನಿರ್ಧರಿಸಿದೆ. ಪರೀಕ್ಷಾ ಶುಲ್ಕವನ್ನು ಈ ಪರೀಕ್ಷೆಯಿಂದ ಡಿಜಿಟಲ್ ಮಾದ್ಯಮದ ಮೂಲಕ ಸಂದಾಯ ಮಾಡುವುದು ಕಡ್ಡಾಯವಾಗಿದೆ.

ಮೇಲೆ ತಿಳಿಸಿದ ಬದಲಾವಣೆಗಳು ಡಿಸೆಂಬರ್-2018ರ ಪ್ರಾಯೋಗಿಕ/ಲಿಖಿತ ಪರೀಕ್ಷೆಗಳಿಂದ ಪ್ರಾರಂಭವಾಗುವುದು. ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು. ಇದಕ್ಕೆ ಪೂರಕವಾದ ಇತರೆ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.

ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬಿ.ಇಡಿ ಸೆಮಿಸ್ಟರ್ ಪದವಿ ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳ ಮೊದಲೇ ನಡೆಸತಕ್ಕದ್ದು, ಮತ್ತು ಲಿಖಿತ ಪರೀಕ್ಷೆಗಳು ಡಿಸೆಂಬರ್-2018 ರಲ್ಲಿ ಪ್ರಾರಂಭವಾಗುತ್ತವೆ. ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು. ಇದಕ್ಕೆ ಪೂರಕವಾದ ಇತರೆ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

### ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು

| | | |
|---|---|---|
| ದಂಡಶುಲ್ಕವಿಲ್ಲದೆ | ------------------- | 13-11-2018 ರಿಂದ 05-12-2018 ರವರೆಗೆ |
| ದಂಡಶುಲ್ಕ ರೂ.110 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------- | 06-12-2018 ಮತ್ತು 07-12-2018 ರವರೆಗೆ |
| ದಂಡಶುಲ್ಕ ರೂ.550 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------- | 08-12-2018 ರಿಂದ 10-12-2018 ರವರೆಗೆ |

### ಶುಲ್ಕದ ವಿವರಗಳು:

01. ಬಿ.ಇಡಿ ಸೆಮಿಸ್ಟರ್ ಸ್ಕೀಂ:-

| | | | |
|---|---|---|---|
| 01 | 2ನೇ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.<br>ಅಂಕಪಟ್ಟಿ ಶುಲ್ಕ ರೂ.<br>ಒಟ್ಟು ಶುಲ್ಕ ರೂ. | 720.00<br>150.00<br>---------<br>870.00 |
| 02 | 4ನೇ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ<br>ಪ್ರಾಯೋಗಿಕ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.<br>ಅಂಕಪಟ್ಟಿ ಶುಲ್ಕ ರೂ.<br><br>ಒಟ್ಟು ಶುಲ್ಕ ರೂ. | 720.00<br>150.00<br>500.00<br>--------<br>1370.00 |
| 03 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ<br>(ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.720/-ಕ್ಕೆ ಒಳಪಟ್ಟು) | | ರೂ. 165.00 |
| 04 | ಪ್ರಾಯೋಗಿಕ ಪರೀಕ್ಷೆಗೆ ಒಂದು ವಿಷಯಕ್ಕೆ (ಫೇಲ್ ವಿದ್ಯಾರ್ಥಿಗಳಿಗೆ) | | ರೂ. 250.00 |

**ಪ್ರವೇಶಾತಿ ಸಂದರ್ಭದಲ್ಲಿ ಪದವಿ ಪ್ರಮಾಣಪತ್ರಕ್ಕಾಗಿ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳು ಅಂತಿಮ ಸೆಮಿಸ್ಟರ್‌ಪರೀಕ್ಷಾ ಶುಲ್ಕದ ಜೊತೆಯಲ್ಲಿಯೇ ಕಡ್ಡಾಯವಾಗಿ ಪದವಿ ಪ್ರಮಾಣ ಪತ್ರದ ಶುಲ್ಕವನ್ನು ಈ ಕೆಳಕಂಡಂತೆ ಪ್ರತ್ಯೇಕವಾಗಿ ಪಾವತಿಸುವುದು.**

| ಪ್ರಮಾಣ ಪತ್ರದ ಶುಲ್ಕ<br>ಅರ್ಜಿ ಶುಲ್ಕ ಸೇರಿದಂತೆ | ಸಾಮಾನ್ಯ | SC/ST |
|---|---|---|
| | ರೂ.730.00 | ರೂ.590.00 |

**4ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 1 ಮತ್ತು 3ನೇ ಸೆಮಿಸ್ಟರ್‌ನಲ್ಲಿ ಯಾವುದಾದರೂ ಫೇಲ್ ಆದ ವಿಷಯಗಳಿಗೆ ಪರೀಕ್ಷೆ ಬರೆಯುವವರೆಗೆ ರೂ.500/- ಗಳ ವಿಶೇಷ ಶುಲ್ಕದೊಂದಿಗೆ ಅನುಮತಿ ನೀಡಲಾಗಿದೆ.**

## ವಿದ್ಯಾರ್ಥಿಗಳಿಗೆ ಸೂಚನೆ:–

1. ವಿದ್ಯಾರ್ಥಿಗಳು **Online** ಮುಖಾಂತರ ಅರ್ಜಿ ಸಲ್ಲಿಸಲು **studentportal.universitysolutions.in** ನಲ್ಲಿ **login** ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.
3. ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಪ್ರಥಮ ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಖಡ್ಡಾಯವಾಗಿ ತೆಗೆದುಕೊಳ್ಳುವುದು.
4. ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಮರು ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ವಿಷಯಗಳ ಆಯ್ಕೆಯು ವಿದ್ಯಾರ್ಥಿಗೆ ಇರುವುದು.
5. ವಿದ್ಯಾರ್ಥಿಗಳು ಪ್ರವೇಶ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
6. ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡಲು 03 ವಿಧಾನಗಳನ್ನು ಒದಗಿಸಲಾಗಿದೆ.
   - ವಿದ್ಯಾರ್ಥಿಯು Web Portal ಮುಖಾಂತರ ಬ್ಯಾಂಕ್ ಚಲನ್ ಸಿದ್ಧಪಡಿಸಿ ಕಾಲೇಜಿನ ಬ್ಯಾಂಕ್‌ನಲ್ಲಿ ಹಣ ಪಾವತಿಸಿ ನಂತರ ಸಂಬಂಧಿಸಿದ ಚಲನ್ ಪ್ರತಿ ಹಾಗೂ ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು. ಈ ವಿಧಾನದಲ್ಲಿ ಯಾವುದೇ ಸೇವಾ ಶುಲ್ಕವಿರುವುದಿಲ್ಲ.
   - ವಿದ್ಯಾರ್ಥಿಯು Web Portal ಮುಖಾಂತರ ಅಂಚೆ ಕಛೇರಿಯ ಚಲನ್ ಸಿದ್ಧಪಡಿಸಿ ದೇಶಾದ್ಯಂತ ಇರುವ ಅಂಚೆ ಕಛೇರಿಯಲ್ಲಿ ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.
   - ವಿದ್ಯಾರ್ಥಿಯು Web Portal ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card / Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.
7. ವಿದ್ಯಾರ್ಥಿಗಳು ತಮ್ಮ Web Portal ನಿಂದ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಸ್ವತಃ ಪಡೆಯಬಹುದು.
8. ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಿದ ತಕ್ಷಣ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯುವ ಅರ್ಹತೆ ಇದೆಯೆಂದು ಪರಿಗಣಿಸಲಾಗುವುದಿಲ್ಲ.

<u>ವಿಶೇಷ ಸೂಚನೆ:</u>ವಿದ್ಯಾರ್ಥಿಗಳು **Internet Browsing center**ನ ಮಾಲಿಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು.

9. ಅ) ರೂ.2.50.000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ **Fresherss** ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ) ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಇಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ.150/– (ಒಂದು ನೂರ ಐವತ್ತು ಮಾತ್ರ) ನ್ನು ಮಾತ್ರ ಪಾವತಿಸಬೇಕು.
10. ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಈ ವರ್ಗದವರಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು.
11. ರೂ.2.50.000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪ್ರವರ್ಗ–1ರ **Fresherss** ವಿದ್ಯಾರ್ಥಿಗಳು ಹಾಗೂ ರೂ.1.00.000/–ಕ್ಕಿಂತ ಕಡಿಮೆ ಆದಾಯ ಹೊಂದಿರುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು 2ಎ.3ಎ.3ಬಿ ಸೇರಿದ **Fresherss** ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ.ಆದರೆ ಅಂತಹ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್/ವರ್ಷದಲ್ಲಿ ಎಲ್ಲಾ ವಿಷಯಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಆಗ ಅಂಕಪಟ್ಟಿ ಶುಲ್ಕ ರೂ.150/– (ಒಂದು ನೂರ ಐವತ್ತು ಮಾತ್ರ)ನ್ನು ಮಾತ್ರ ಪಾವತಿಸಬೇಕು.ಮಾಹಿತಿಗಾಗಿ ಸರ್ಕಾರಿ ಆದೇಶದ ಪ್ರತಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಿದೆ.

12. ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು.

13. ಪ್ರವರ್ಗ-2 ಗೆ ಸೇರಿದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ ಈ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಕಾರಣ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:ಅಂಇಪ್ರ/ಉ:400:ಅಂಇಪಿಸ್-2014 ದಿನಾಂಕ:17-10-2014ಇಲಾಖೆ. ಬೆಂಗಳೂರು.ಈ ಆದೇಶದಲ್ಲಿ ಶುಲ್ಕ ವಿನಾಯಿತಿಯನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ.

14. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ರೂ.550/- ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ.

15. ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು

## ಪ್ರಾಚಾರ್ಯರಿಗೆ ಸೂಚನೆ:-

16. ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು Web Portal ಮುಖಾಂತರ ಮಾಡಬೇಕು.

17. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ (Register No.) ಹಾಗೂ ಗುರುತಿನ ಸಂಖ್ಯೆ (Student ID) ತಯಾರು ಮಾಡಿ ಕಾಲೇಜುಗಳಿಗೆ ಅಂತರ್ಜಾಲದ ಮುಖಾಂತರ ಕಳುಹಿಸುವುದು.

18. ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಎಲ್ಲಾ ರೀತಿಯ ಅರ್ಹತೆಗಳು ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.

19. ಕಾಲೇಜಿನ ಪ್ರಾಂಶುಪಾಲರು Web Portal ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು ದೃಢೀಕರಿಸಬೇಕು.

20. ಕಾಲೇಜಿನ ಪ್ರಾಂಶುಪಾಲರು Web Portal ಮುಖಾಂತರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ರಿಯಾಯಿತಿಯ ಬಗ್ಗೆ ದೃಢೀಕರಿಸಬೇಕು.

21. ಕಾಲೇಜಿನ ಪ್ರಾಂಶುಪಾಲರು Web Portal ಮುಖಾಂತರ ವಿದ್ಯಾರ್ಥಿಗಳ ಪ್ರವೇಶ ಪತ್ರಿಕೆಯ ತಡೆಯ ಬಗ್ಗೆ ದೃಢೀಕರಿಸಬೇಕು.

22. ಕಾಲೇಜು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ Web Portal ಮುಖಾಂತರ ತಿಳಿಸಲಾಗುವುದು.

23. ಕಾಲೇಜಿನ ಪ್ರಾಂಶುಪಾಲರು Web Portal ಮುಖಾಂತರ ತಮ್ಮ ಕಾಲೇಜಿನ ಬ್ಯಾಂಕ್ ವಿವರಗಳನ್ನು ಒದಗಿಸಬೇಕು, ಇಲ್ಲವಾದಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜಿನ ಬ್ಯಾಂಕ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿ ಮಾಡಲು ಅವಕಾಶವಿರುವುದಿಲ್ಲ.

24. ಕಾಲೇಜುಗಳಿಗೆ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮಾಡಿದ ವಿವರಗಳು ಕಾಲೇಜಿನ Web Portal ನಲ್ಲಿ ಲಭ್ಯವಿರುತ್ತದೆ.

25. ಕಾಲೇಜಿನ ಬ್ಯಾಂಕ್‌ನಲ್ಲಿ ವಿದ್ಯಾರ್ಥಿಗಳು ಸಂದಾಯ ಮಾಡಿದ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದೊಳಗೆ Payment Gateway ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.

26. ವಿಶ್ವವಿದ್ಯಾನಿಲಯವು ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಅಂತರ್‌ಜಾಲದ ಮುಖಾಂತರವೇ ವಿದ್ಯಾರ್ಥಿಗಳಿಗೆ ಒದಗಿಸುವುದು.

27. ಅವಶ್ಯವಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಕಾಲೇಜುಗಳು ಮುದ್ರಿಸಿ ಒದಗಿಸತಕ್ಕದ್ದು.

28. ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು Web Portal ಮುಖಾಂತರ ತಿಳಿಸುವುದು.ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.

29. ಕಾಲೇಜಿಗೆ ಸಂಬಂಧಪಟ್ಟ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪಟ್ಟಿಯನ್ನು Web Portal ಮುಖಾಂತರ ಒದಗಿಸಲಾಗುವುದು.

30. ಪ್ರಾಯೋಗಿಕ ಪರೀಕ್ಷೆಯ ತಯಾರಿಯನ್ನು ಕಾಲೇಜಿನ Web Portal ಮುಖಾಂತರವೇ ಮಾಡುವುದು.

31. ಪ್ರಾಯೋಗಿಕ ಪರೀಕ್ಷೆಯ Batch Preparation ಹಾಗೂ ಅಂಕಗಳ ದಾಖಲಾತಿಯನ್ನು Web Portal ಮುಖಾಂತರವೇ ಮಾಡುವುದು.

32. ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕೊಠಡಿಗಳನ್ನು (Room Allotment) ಆನ್‌ಲೈನ್ ಮೂಲಕ ನಿಗದಿಪಡಿಸಿಕೊಳ್ಳುವುದು.

33. Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ದಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್ ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.

34. ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್ ಲೈನ್ ಮೂಲಕವೇ ನಮೂದಿಸುವುದು.

35. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ಇತರೆ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ. ಸರ್ಕಾರಿ ಆದೇಶ ಸಂಖ್ಯೆ:ಹಿವಿಕ:589: ಬಿಎಂಎಸ್:2013: ಇಲಾಖೆ.ಬೆಂಗಳೂರು. ಇವರ ದಿನಾಂಕ 05-10-2013ರ ಪ್ರಕಾರ ವಿದ್ಯಾರ್ಥಿಗಳಿಗೆಶುಲ್ಕಮರುಭರಿಕೆಗೆ ಕ್ರಮ ಕೈಗೊಳ್ಳತಕ್ಕದ್ದು.

36. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ ಇತರ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ. ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಬೆಂಗಳೂರು.ಇವರ ಸಂಖ್ಯೆ:ಹಿಂವಕಇ/ಶುವಿ/ಸಿ.ಆರ್-34:2014-15ದಿನಾಂಕ:19-09-2014ರ ಪ್ರಕಾರ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಶುಲ್ಕಮರುಭರಿಕೆ ಹಣವನ್ನು ಪ್ರಾಚಾರ್ಯರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಶುಲ್ಕಮರುಭರಿಕೆಯಾದ ನಂತರ ಸದರಿ ಮೊತ್ತವನ್ನು ದಾವಣಗೆರೆ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳತ್ತಕ್ಕದ್ದು.

37. ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ (ಪ್ರವರ್ಗ-1.2ಎ.3ಎ.3ಬಿ). ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಪಟ್ಟಿಯನ್ನು **Web Portal** ಮುಖಾಂತರ ಸಿದ್ಧಪಡಿಸಿ ಈ ಕಛೇರಿಗೆ ಸಲ್ಲಿಸತಕ್ಕದ್ದು.

38. ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.

39. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪ್ರಾಚಾರ್ಯರು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿ ವೇತನದಲ್ಲಿ ಕಡ್ಡಾಯವಾಗಿ ಕಟಾಯಿಸಿ ಎಲ್ಲಾ ವಿವರಗಳೊಂದಿಗೆ ವಿಶ್ವವಿದ್ಯಾನಿಲಯದ ನಿಧಿಗೆ Payment Gateway ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.

40. ಹೆಚ್ಚಿನ ಕಾಲೇಜುಗಳು ಕಳೆದ ಸಾಲಿನ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿರುವುದನ್ನು ಗಮನಿಸಲಾಗಿದೆ ಆದ್ದರಿಂದ ಈ ಬಾರಿ ತಕ್ಷಣ ಕ್ರಮ ಜರುಗಿಸುವುದು.

41. ಶುಲ್ಕವನ್ನು ನಗದು/ಚೆಕ್ ಮೂಲಕ ವಿದ್ಯಾರ್ಥಿಗಳಿಂದ ನೇರವಾಗಿ ಸ್ವೀಕರಿಸುವುದಿಲ್ಲ. ಆದರೆ ಶುಲ್ಕವನ್ನು ವಿದ್ಯಾರ್ಥಿಗಳಿಂದ ನಗದಾಗಿ ಪಡೆದು ಒಟ್ಟು ಶುಲ್ಕಕ್ಕೆ **Online** ಮೂಲಕ ದಿನಾಂಕ: 06-12-2018 ರಂದು ಒಂದು ಮೊದಲಗಿನ ಕಂತನ್ನು, ದಿನಾಂಕ: 08-12-2018 ರಂದು **Online** ಮೂಲಕ ಮತ್ತೊಂದು ಕಂತನ್ನು, **Online** ಮೂಲಕ ದಿನಾಂಕ:11/12/2018 ರಂದು ಕೊನೆಯ ಕಂತನ್ನು ಕೂಡ **Online** ಮೂಲಕ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಕಳುಹಿಸಿ ಒಂದು ಪ್ರತಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಪರೀಕ್ಷಾ ಅರ್ಜಿಯೊಂದಿಗೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಚಲನ್ ಮೂಲಕ ಹಣ ಪಾವತಿಸತಕ್ಕದ್ದಲ್ಲ.

42. ಮುದ್ರಿತ ನಮೂನೆಗಳು(ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಸಹ ದಿನಾಂಕ:30-11-2018 ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

43. ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ.ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಕಾರಣ, ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಇಲ್ಲದವರಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.

44. ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ.ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

45. ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವ ವಿದ್ಯಾನಿಲಯಕ್ಕೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 6363341215. 6363337901 ಹಾಗೂ 6363351762 ಸಂಪರ್ಕಿಸಬಹುದು.

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577002.

ಅಡಕ:-ಪರೀಕ್ಷಾ ಶುಲ್ಕ ವಿನಾಯಿತಿಗೆ ಸಂಬಂಧಿಸಿದ ಸರ್ಕಾರದ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಇದನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್, ಬೆಂಗಳೂರು.
6. ಕಛೇರಿ ಪ್ರತಿ.